# ವಜ್ರದ ಹೊಳಪು ವಿನ್ಯಾಸದ ಸೊಗಸು

**ವಜ್ರಾಭರಣಗಳು ಮಹಿಳೆಯರಿಗೆ ಮೆಚ್ಚು. ದುಬಾರಿ ಎನಿಸಿದರೂ ತಿಜೋರಿಯಲ್ಲಿ ಒಂದಾದರೂ ವಜ್ರದ ಒಡವೆ ಇರಬೇಕು ಎಂಬ ತವಕ. ಮಹಿಳೆಯರ ಮನದಿಂಗಿತ ಅರಿತ ವಜ್ರಾಭರಣ ಮಳಿಗೆ ಮಾಲೀಕರು ಮಧ್ಯಮ ವರ್ಗದವರಿಗೂ ಕೈಗೆಟುಕುವ ದರದಲ್ಲಿ ವಜ್ರದ ಆಭರಣ ತಯಾರಿಸಿ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿದ್ದಾರೆ.**

**■ ಕೇಶವ ಪ್ರಸಾದ್ ಮುಳಿಯ**

ಚಿತ್ರಗಳು: ಮುಳಿಯ ಕೇಶವ ಭಟ್ & ಸನ್ಸ್



ರೂಪದರ್ಶಿ: ಐಶ್ವರ್ಯ

'ವಜ್ರ' ಎಂಬ ಹೆಸರು ಕೇಳುವಾಗಲೇ ಉತ್ಕೃಷ್ಟ ಎನ್ನುವ ಮನೋಭಾವನೆ ಬರುತ್ತದೆ. ಯಾವುದೇ ಉತ್ತಮ ಗುಣ ಲಕ್ಷಣಗಳನ್ನು, ಸದೃಢತೆಯನ್ನು ಹೋಲಿಸಬೇಕಾದರೆ ವಜ್ರಕ್ಕೆ ಹೋಲಿಸುತ್ತೇವೆ. ಶ್ರೇಷ್ಠದಲ್ಲಿ ಅತೀ ಶ್ರೇಷ್ಠ ಸ್ಥಾನ ವಜ್ರಕ್ಕಿದೆ. ನವರತ್ನಗಳಲ್ಲಿ ಬಹುಮುಖ್ಯ ರತ್ನ ಇದು. ಹಿಂದೆ ದೇವರ ಮೂರ್ತಿಗಳ ಅಲಂಕಾರಕ್ಕೆ, ರಾಜರುಗಳಿಗೆ, ಶ್ರೀಮಂತರಿಗೆ ಮಾತ್ರ ಧರಿಸುವ ಭಾಗ್ಯ ಇತ್ತು. ಇಂದು 'ಪ್ರಜೆಗಳೇ ಪ್ರಭುಗಳು'. ಹಾಗಾಗಿ ಎಲ್ಲರಿಗೂ ವಜ್ರವನ್ನು ಧರಿಸುವಂತಹ ಭಾಗ್ಯ ಒದಗಿ ಬಂದಿದೆ. ವಜ್ರಗಳ ಮೌಲ್ಯವನ್ನು ಅವುಗಳ ಕೆಲವು ಗುಣಮಟ್ಟಗಳಿಂದ ನಿರ್ಧರಿಸಲಾಗುವುದು. ವಜ್ರವು 4 ಗುಣಲಕ್ಷಣಗಳಿಂದ ಕೂಡಿರುತ್ತದೆ.

- ಕ್ಯಾರಟ್ ತೂಕ • ಕಟ್ – ಕೆತ್ತನೆ
- ಕಲರ್– ಬಣ್ಣ • ಕ್ಲ್ಯಾರಿಟಿ ಶುಭ್ರತೆ

ಇದನ್ನು 'ಫೋರ್ ಸೀಸ್ ಆಫ್ ಡೈಮಂಡ್' ಎನ್ನುತ್ತಾರೆ.

**ಕ್ಯಾರಟ್**

ವಜ್ರಗಳು ತೂಕವನ್ನು ಕ್ಯಾರಟ್ ಮಾಪನದಲ್ಲಿ ಅಳೆಯಲಾಗುತ್ತದೆ. ಒಂದು ಕ್ಯಾರಟ್ ಎಂದರೆ 200 ಮಿಲಿ ಗ್ರಾಂ ಅಥವಾ 100 ಸೆಂಟ್ಸ್.

ಗಮನಿಸಬೇಕಾದ ಅಂಶ– ಚಿನ್ನದಲ್ಲಿ ಕ್ಯಾರಟ್ ಎಂದರೆ ಶುದ್ಧತೆಯ ಮಾಪನ, ಆದರೆ ವಜ್ರದಲ್ಲಿ ಕ್ಯಾರಟ್ ಎಂದರೆ ತೂಕ. ತೂಕ ಜಾಸ್ತಿ ಇದ್ದಷ್ಟು ಕ್ಯಾರಟ್ ಒಂದರ ಬೆಲೆ ಏರುತ್ತಾ ಹೋಗುತ್ತದೆ. ಅಂದರೆ 100 ವಜ್ರಗಳು ಸೇರಿ ಒಂದು ಕ್ಯಾರಟ್ ಆದಾಗಿನ ಬೆಲೆಗೂ ಏಕೈಕ ಒಂದು ಕ್ಯಾರಟ್‌ನ ಒಂದು ವಜ್ರದ ಬೆಲೆಗೂ ಅಜಗಜಾಂತರ ವ್ಯತ್ಯಾಸವಿದೆ. ಸಿಂಗಲ್ ವಜ್ರ ಅಧಿಕ ಮೌಲ್ಯ ಹೊಂದಿರುತ್ತದೆ. ಕಾರಣ ಇಷ್ಟೇ ದೊಡ್ಡ ವಜ್ರ ಲಭ್ಯವಾಗುವುದು ತುಂಬಾ ಅಪರೂಪ. ಆದುದರಿಂದಲೇ 105.6 ಕ್ಯಾರಟ್‌ನ ಕೋಹಿನೂರ್ ವಜ್ರಕ್ಕೆ ಬೆಲೆ ಕಟ್ಟಲಾಗದಿರುವುದು.

**ಕಟ್**

ಕಟ್‌ನಲ್ಲಿ 2 ಅಂಶಗಳಿವೆ.

1. ವಜ್ರದ ಆಕಾರ 2. ಕೆತ್ತನೆ ನೈಪುಣ್ಯ